ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Wednesday, 14th October 1970.

The House met in the Assembly Chamber, Vidhana Soudha, Bangalore, at One of the Clock.

MR. DEPUTY SPEAKER (SRI D. MANJUNATH) in the Chair

STARTED QUESTIONS

(to which oral answers were given)

SHORTAGE OF BUILDINGS IN TUMKUR TOWN TO ACCOMMODATE SCHOOLS AND GOVERNMENT OFFICES

57. SRI B. P. GANGADHAR (Tumkur) :—

Will the Minister for Education be pleased to state:—

(*a*) whether it has come to the notice of Government that the Primary and Secondary Schools are located in rented buildings Tumkur Town ;

(*b*) whether Government is aware that due to insufficient accommodation in the rented buildings there is overcrowding and much inconvenience is being felt;

(*c*) if so, the steps taken by Government to provide adequate accommodation facilities to these schools;

(*d*) the total number of Primary and Secondary Schools situated in Tumkur Town, the number of them that are located in Government buildings and the number of them that are located in rented buildings;

(*e*) the total amount paid by way of rent for such rented school buildings in Tumkur Town;

(*f*) whether Government is aware that a building of a Middle School (Krishnarajendra Middle School) collapsed several years ago and no action has been taken to repair the building so far;

(*g*) the reason for the delay in repairing the school building?

SRI K. V. SHANKARA GOWDA (Minister for Education):—

(*a*) Yes

(*b*) Yes, in 13 schools there is overcrowding.

(*c*) Recently, Government have taken a decision to subsidise the construction of Primary School Buildings in Municipal areas to the extent of 50 per cent of the cost of construction. It is hoped that the Tumkur Municipality and the local people will soon avail this concession and remedy the situation.

(*d*)	*In Government buildings*	*In rented buildings*	*Total*
No. of Primary School ...	10	24	41*
No. of Secondary Schools ...	2	5	10**

(*e*) Rs. 1,269-00

(*f*) Yes

(*g*) The building was handed over to the Church of South India authorities who are the owners, for repairs. But they seem to be having the intention of selling away the building to Government. The matter is under correspondence.

ಶ್ರೀ ಬಿ. ಪಿ. ಗಂಗಾಧರ್;—ಓವರ್‌ಕ್ರೌಡಿಂಗ್ ಇದೆ ಎಂದು ಸರ್ಕಾರದವರೇ ಒಪ್ಪಿಕೊಳ್ಳುತ್ತಾರೆ. I do not know why my question is pruned. I wanted to know the plinth area of every class-room in Tumkur Town Schools. ಒಂದೊಂದು ಕ್ಲಾಸ್ ರೂಂ ೧೦ ಅಡಿ ಉದ್ದ ೧೦ ಅಡಿ ಅಗಲವಿದ್ದರೆ ಆದರಲ್ಲಿ ೫೦-೬೦ ಜನರನ್ನು ಕುರಿಗಳಿಗಿಂತ ಕಡೆಯಾಗಿ ಪರಿಗಣಿಸಿ ನೂಕುತ್ತಿದ್ದಾರೆ. ಪ್ಲಿಂತ್ ಏರಿಯಾ ಎಷ್ಟು ಎಂದು ಕೇಳಿದೆ. ಉತ್ತರವಿದ್ದರೆ ಈಗ ಆದರೂ ಹೇಳಬಹುದು.

†ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ:—ಪ್ರತಿಯೊಂದು ಶಾಲಾ ಕಟ್ಟಡದ ಪ್ಲಿಂತ್ ಏರಿಯಾ ಹೇಳುವುದು ಕಷ್ಟವಾಗುತ್ತದೆ. ಆದರೆ ಅಲ್ಲಿ ಓವರ್ ಕ್ರೌಡಿಂಗ್ ಇದೆ ಎನ್ನುವುದನ್ನು ಒಪ್ಪಿಕೊಂಡಿದ್ದೇವೆ. ಅದನ್ನು ಬಗೆಹರಿಸುವುದಕ್ಕೆ ಸಾಕಷ್ಟು ಸ್ಥಳಾವಕಾಶವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದರಲ್ಲಿ ಸ್ಥಳೀಯ ಪುರಸಭೆ ಸಹ ಸಹಕರಿಸಬೇಕು. ಆವರ ಕೋಟಾ ೫೦ ಪರ್ಸೆಂಟ್ ಕೊಡುವುದಾದರೆ ಸರ್ಕಾರದಿಂದ ೫೦ ಪರ್ಸೆಂಟ್ ಸಹಾಯ ಕೊಟ್ಟು ಕಟ್ಟಡ ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಬಿ. ಪಿ. ಗಂಗಾಧರ್.—ಕೆ. ಆರ್. ಎಕ್ಸ್‌ಟೆನ್‌ಷನ್‌ನಲ್ಲಿ ಒಂದು ಸರ್ಕಾರಿ ಶಾಲೆ ಇತ್ತು. ಅದು ಬಿದ್ದುಹೋಯಿತು. ಅದು ಏಳೆಂಟು ವರ್ಷ ಕೂಡ ಇರಲಿಲ್ಲ. ಆ ಕಟ್ಟಡದ ಕೆಲಸವನ್ನು ಯಾವರೀತಿ ಮಾಡಿದ್ದರೋ ಏನೋಗೊತ್ತಿಲ್ಲ. ಅದರ ವಿಚಾರದಲ್ಲಿ ಏನು ಕ್ರಮ ತೆಗೆದುಕೊಂಡಿದ್ದಾರೆ ? ಬಿದ್ದು ಹೋದ ಶಾಲಾ ಕಟ್ಟಡವನ್ನು ಕಟ್ಟಿಸುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ :—ಅದು ರೆಂಟೆಡ್ ಬಿಲ್ಡಿಂಗ್.

(*including 7 schools which are either in rent-free buildings or in own buildings)

(**including 3 in own buildings).

SRI B. P. GANGADHAR.—The Hon. Deputy Minister did not answer my question. There was a Government building and it was constructed at a cost of Rs.2 lakhs or so, I do not know the exact cost. It is a very big building and it came down within 8 years. That must be due to perfunctory work. What action has the Government taken to punish the miscreants and the contractors and to erect a new buildings?

ಶ್ರೀ ಟಿಎಸ್. ಎಂ. ಕೊಟ್ರಬಸಯ್ಯ ಸೋಗಿ:–ನನ್ನಹತ್ತಿರ ಇರುವ ಮಾಹಿತಿ ಪ್ರಕಾರ ಆ ಕಟ್ಟಡ ಚರ್ಚ್ ಆಫ್ ಸೌತ್ ಇಂಡಿಯಾಕ್ಕೆ ಸೇರಿದ್ದು. ಅವರಿಂದ ಅದನ್ನು ಏಾಲಾ ಕಟ್ಟಡಕ್ಕಾಗಿ ಪಡೆದುಕೊಳ್ಳಲಾಗಿತ್ತು. ಆ ಕಟ್ಟಡವನ್ನು ರಿಪೇರಿ ಮಾಡಬೇಕಾದ ಜವಾಬ್ದಾರಿ ಅದರ ಮಾಲೀಕರದ್ದು. ಅದಕ್ಕಾಗಿ ಒತ್ತಾಯ ಮಾಡುತ್ತಿದ್ದೇವೆ. ಇದರ ಬಗ್ಗೆ ಮಾನ್ಯ ಸದಸ್ಯರಿಗೆ ಬೇರೆ ಅಭಿಪ್ರಾಯವಿದ್ದರೆ ಅದನ್ನು ಸರ್ಕಾರದ ಗಮನಕ್ಕೆ ತಂದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಾಪೂ ಗೌಡ:—ಪ್ರಾಥಮಿಕ ಶಾಲೆಗಳನ್ನು ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಯಾವರೀತಿ ಕಟ್ಟಿಸುತ್ತೀರಿ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ:–ಮುನಿಸಿಪಾಲಿಟಿಗಳಲ್ಲಿ ಅರ್ಧ ಭಾಗದುಷ್ಟನ್ನು ಸಂಬಂಧಪಟ್ಟ ಮುನಿಸಿಪಾಲಿಟಿಗಳರು ಕೊಡಬೇಕುಎಂದು ಸರ್ಕಾರದ ಆದೇಶವಿದೆ. ಆದರೆ ಅದನ್ನು ಕೊಡುವಾಗ ಸರ್ಕಾರದ ಹಣಕಾಸಿನ ಪರಿಸ್ಥಿತಿಗನುಗುಣವಾಗಿ ಕೆಲಸವನ್ನು ಕೈಗೊಳ್ಳಲಾಗುತ್ತದೆ. ಗ್ರಾಮೀಣ ಮಟ್ಟದಲ್ಲಿ ತಾಲ್ಲೂಕು ಬೋರ್ಡಿನವರು ಮತ್ತು ಗ್ರಾಮ ಪಂಚಾಯಿತಿಗಳು ಅಥವಾ ಗ್ರಾಮಸ್ಥರು ಕೊಡಬೇಕೆಂದಿದೆ ಇಲ್ಲಿ ಯವರೆಗೂ ಒಂದು ಕೊಠಡಿಗೆ ಒಂದು ಸಾವಿರ ರೂಪಾಯಿ ಪ್ರಕಾರ ಸರ್ಕಾರದಿಂದ ಕೊಡಲಾಗಿತ್ತು. ಅದನ್ನು ಈಗ ಎರಡು ಸಾವಿರ ರೂಪಾಯಿಗಳಿಗೆ ಏಚ್ಚಿಸಲಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ:—ಮುನಿಸಿಪಾಲಿಟಿಯವರು ಅರ್ಧ ಭಾಗ ಕೊಡಬೇಕೆಂದು ಹೇಳುತಿದ್ದಾರೆ. ತುಮಕೂರು ಮುನಿಸಿಪಾಲಿಟಿಗೆ ಮಾತ್ರ ಅನ್ವಯವಾಗುತ್ತದೆಯೋ ಅಥವಾ ರಾಜ್ಯದ ಎಲ್ಲಾ ಮುನಿಸಿಪಲ್ ಪ್ರದೇಶಗಳಿಗೂ ಇದೇಪದ್ಧತಿಯನ್ನು ಅನುಸರಿಸಲಾಗುತ್ತಿದೆಯೋ ? ಬೆಂಗಳೂರು ಕಾರ್ಪೊರೇಷನ್ ಪ್ರದೇಶದಲ್ಲಿ ವಿನಾಯಿತಿಯನ್ನು ಕೊಟ್ಟಿಲ್ಲವೇ? ಹಾಗಿದ್ದರೆ ತುಮಕೂರಿಗೂ ಆದೇ ರೀತಿ ವಿನಾಯಿತಿ ಏಕೆ ಕೊಡಬಾರದು?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ:—ಇದು ರಾಜ್ಯವಲ್ಲಿರುವ ಎಲ್ಲಾ ಮುನಿಸಿಪಾಲಿಟಿಗಳಿಗೂ ಸಂಬಂಧಪಡುವ ವಿಷಯ. ಬೆಂಗಳೂರು ಕಾರ್ಪೊರೇಷನ್ನಿನವರು ತಮ್ಮದೇ ಹಣದಿಂದ ಕಟ್ಟಿಸುತ್ತಿದ್ದಾರೆ. ಕಾರ್ಪೊರೇಷನ್ನಿನ ವಿಚಾರವೇ ಬೇರೆ, ಮುನಿಸಿಪಾಲಿಟಿಗಳ ವಿಚಾರವೇ ಬೇರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:—ಬೆಂಗಳೂರು ಕಾರ್ಪೊರೇಷನ್ನಿಗೆ ವಿನಾಯಿತಿ ಕೊಟ್ಟಿಲ್ಲವೇ?

ಶ್ರೀ ಕೆ. ವಿ. ಶಂಕರಗೌಡ:—ಕೊಟ್ಟಿಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ:—ಮಾನ್ಯ ಉಪ—ಮಂತ್ರಿಗಳು ಕೇಳಿದ ಪ್ರಶ್ನೆಗೆ ಸರಿಯಾದ ಉತ್ತರ ಕೊಡುತ್ತಿಲ್ಲ, ಕೇಳುವ ಪ್ರಶ್ನೆಯೇ ಬೇರೆ, ಕೊಡುವ ಉತ್ತರವೇ ಬೇರೆ. ಸರಕಾರಿ ಕಟ್ಟಡ ಪೂರ್ಣವಾಗಿ ಬಿದ್ದುಹೋಗಿದೆಯೇ ಎಂಬುದಕ್ಕೆ ಉತ್ತರ ಹೇಳಲಿಲ್ಲ. ಅದು ಬಿದ್ದಿರುವುದು ನಿಜವೇ ? ಅದನ್ನು ಕಟ್ಟಿಸಿರುವ ಇಂಜಿನಿಯರು ಬದುಕಿರುವರೇ ? ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವರೇ ?

Asterisks indicate that remarks or speeches have not been revised by the member concerned.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ: ನನ್ನ ಬಳಿ ಇರುವ ಮಾಹಿತಿ ಪ್ರಕಾರ ನಾನು ಹೇಳಿದೆ. ಮಾನ್ಯ ಸದಸ್ಯರು ರಿಪ್ರೆಸೆಂಟೇಷನ್ ಕೊಟ್ಟರೆ ಇನ್ನೊಂದು ಸಲ ವಿಚಾರಮಾಡಲಾಗುವುದು.

SRI B. P. GANGADHAR:—Sir, he does not know the exact nature of things So why should he answer like this ? This is some thing unpardonable. I do not know how you are tolerating this, you must pull them up when they make such irresponsible statements. There are ample powers vested in you for that. You must pull them up and see that they give proper answers.

ಶ್ರೀ ಸಿ. ಎಂ. ಎಸ್ ಶಾಸ್ತ್ರಿ :—ಕೇಳುವ ಪ್ರಶ್ನೆಗೆ ಸರಿಯಾದ ಉತ್ತರ ಕೊಡದಿದ್ದರೆ ಪ್ರಯೋಜನವೇನು ? ಕಟ್ಟಡ ಬಿದ್ದುಹೋಗಿ ಎಂಟು ವರ್ಷವಾದ ಎಂದು ಸ್ಪೆಸಿಫಿಕ್ಕಾಗಿ ಹೇಳಿದ್ದಾರೆ, ಅದೂ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರಿನಲ್ಲಿರುವ ಕಟ್ಟಡ ಬಿದ್ದುಹೋಗಿರುವುದು ಗೊತ್ತಿದೆಯೇ ?

(ಉತ್ತರವಿಲ್ಲ)

ಶ್ರೀ ಎಸ್. ಎಸ್. ಅರಕೇರಿ :—ಸರಕಾರವೇ ಪೂರ್ಣವಾಗಿ ಏಕೆ ಕಟ್ಟಬಾರದು ? ಹಾಗೆ ಮಾಡಲು ತೊಂದರೆಯೇನು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ:—ಎಲ್ಲಾ ಸರಕಾರ ಮಾಡುವುದು ಕಷ್ಟ.

ಶ್ರೀ ಎಂ. ಎನ್. ರಾಮಣ್ಣ:—ಈಗ ಕೆ ಆರ್ ಎಕ್ಸ್‌ಟೆನ್‌ಷನ್ನಿನಲ್ಲಿ ಬಿದ್ದುಹೋದ ಕಟ್ಟಡಕ್ಕೆ ಬದಲಾಗಿ ಹೊಸದಾಗಿ ಕಟ್ಟಡ ಕಟ್ಟಿಸಿ ಅದರಲ್ಲಿ ತಾಲೆ ನಡೆಯುತ್ತಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ:—ನೋಟೀಸ್.

SRI D. B. KALAMANKAR:—Supplementaty to (b) ; What is the extent of overcrowding ?

SRI N. M. KOTRABASAIAH SOGI:—I want notice.

SRI H. SIDDAVEERAPPA:—It was stated that this concession is available only to municipal areas. I would like to know whether they would extend the same concession to rural areas also.

SRI KOTRABASAIAH SOGI:—I have already replied to that question. For rual areas we were giving at the rate of Rs. 1000 per room, but since 2 years it is paid at the rate of Rs. 2000 per room.

SRI H. SIDDAVEERAPPA:—But that is under the Gandhi Centenary Year scheme.

SRI N. M. KOTRABASIAH SOGI:—This year we have issued this under the International Education Year scheme.

ಶ್ರೀ ಎಂ ನಾಗಪ್ಪ:—ಹೋದ ವರ್ಷ ಮಹಾತ್ಮ ಗಾಂಧಿಯವರ ಸೆಂಟನರಿ ಸಲುವಾಗಿ ಮತ್ತು ಈ ವರ್ಷ ನ್ಯಾಷನಲ್ ಎಜುಕೇಷನ್ ಸಲುವಾಗಿ ಕೊಡುತ್ತಿದ್ದ ಸೌಲಭ್ಯವನ್ನು ಮುಂದುವರಿಸುವಿರಾ ? ಇಲ್ಲದಿದ್ದರೆ ಮುನಿಸಿಪಾಲಿಟಿಗಳಿಗೆ ಕೊಟ್ಟಿರುವ ಸೌಲಭ್ಯವನ್ನು ಹಳ್ಳಿಗಳಿಗೂ ಕೊಡುವಿರಾ ? ಮುನಿಸಿಪಾಲಿಟಿಗಳಿಗೆ ಗ್ರಾಂಟನ್ನು ಕೊಡುವ ಪದ್ಧತಿಯಿದೆ. ಮುನಿಸಿಪಾಲಿಟಿಯವರು ಹಣ ಖರ್ಚು ಮಾಡಿ ಕಟ್ಟುವರು. ಗ್ರಾಂಟು ಕೊಡಲು ತೊಂದರೆಯಾಗುತ್ತಿದೆ. ಇದರ ಬಗ್ಗೆ ಸೂಕ್ತ ತಿದ್ದುಪಡಿ ಮಾಡಿ ಮುನಿಸಿಪಾಲಿಟಿಗೆ ಸಕಾಲದಲ್ಲಿ ಸರಿಯಾಗಿ ಹಣ ಕೊಡಲು ವ್ಯವಸ್ಥೆ ಮಾಡುವಿರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ:—ಮುನಿಸಿಪಾಲಿಟಿಯವರು ಜಾಗ್ರತೆ ಸರಿಯಾದ ಅಕೌಂಟ್ ಕೊಡದೆ ತೊಂದರೆಯಾಗುತ್ತಿದೆ, ತೊಂದರೆ ತಪ್ಪಿಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಪಿ. ಗಂಗಾಧರ್:—೪೦ ಹುಡುಗರಿರುವ ಒಂದು ಕ್ಲಾಸ್‌ರೂಮಿನ ಅಳತೆ ಎಷ್ಟಿರಬೇಕು ಎಂದು ನಿಗದಿಮಾಡಲಾಗಿದೆಯೇ ? ಸೋಮೇಶ್ವರ ಎಕ್ಸ್‌ಟೆನ್‌ಷನ್‌ನಲ್ಲಿ ಎವೀಕ್‌ಷನ್ ಪ್ರೊಸೀಡಿಂಗ್ಸ್ ನಡೆದಿದೆ. ಅಲ್ಲಿ ಸುಮಾರು ಒಂದು ಸಾವಿರ ವಿದ್ಯಾರ್ಥಿಗಳಿದ್ದಾರೆ. ಅವರಿಗೇನು ವ್ಯವಸ್ಥೆ ಮಾಡಲಾಗಿದೆ ? ಸರಕಾರಕ್ಕೆ ಈ ವಿಚಾರ ಗೊತ್ತಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ: —ಟೈಪ್ ಡಿಸೈನ್ ಪ್ರಕಾರ ೨೦ ಅಡಿ — ೪೦ ಅಡಿ ಇರಬೇಕು ಎಂದಿದೆ. ಆದರೆ ಆ ಪ್ರಕಾರ ಎಲ್ಲಾ ಕಡೆಯೂ ಮಾಡಬೇಕೆಂದು ಹೇಳುವುದಕ್ಕಾಗುವುದಿಲ್ಲ. ಎಲ್ಲಾ ಕಡೆಯೂ ಇಷ್ಟೇ ಅಳತೆ ಇರಬೇಕೆಂದು ಹೇಳುವುದು ಕಷ್ಟ. ಕೆಲವು ಖಾಸಗಿ ಕಟ್ಟಡಗಳಲ್ಲಿ ಶಾಲೆಗಳು ನಡೆಯುತ್ತಿವೆ. ನಿಖರವಾಗಿ ನಿರ್ದಿಷ್ಟವಾಗಿ ಹೇಳಲು ಕಷ್ಟವಾಗುವುದು.

SLUM CLEARANCE IN BANGALORE CITY

74 SRI T. R. SHAMANNA (Fort)—

Will the Minister of State for Municilpal Administration be please refer to the replies given to Starred Question No. 510 on 24-3-1970 and state:—

whether Goverment has any proposal before it to appoint an independent Highpower Committee for the implementation of the slum clearance scheme and arrange to provide necessary funds for the purpose as follows—

(i) by the State and Central Government ;

(ii) by the Bangalore City Corporation ;

(iii) by the City Improvement Trust Board and other agencies ;

(iv) by allotting funds Housing Board funds and Social Welfare Department, etc. ?

SRI B. M. PATIL A Minister of state for Municipal Administration:—

No.